**CC 123/2023**
**PW-1**

**ದಿಃ 19-10-2023 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.**

**<u>ಪಾಟೀಸವಾಲುಃ ಆರೋಪಿ ಪರ ಶ್ರೀ ಎ.ಸಿ.ಆರ್. ವಕೀಲರಿಂದ</u>**

ಆರೋಪಿ 7-8 ವರ್ಷಗಳಿಂದ ಪರಿಚಯ. ಆರೋಪಿ ಹಾಗೂ ನನ್ನ ನಡುವೆ 5 ವರ್ಷಗಳಿಂದ ಹಣದ ವ್ಯವಹಾರ ನಡೆದಿರುತ್ತದೆ. ಆರೋಪಿ ಯಾವ ದಿನಾಂಕ, ತಿಂಗಳು, ವರ್ಷದಂದು ನಿಮ್ಮ ಬಳಿ ಸಾಲ ಕೇಳಿದ್ದರು ಎಂದರೆ ಸಾಕ್ಷಿ ದಿಃ10.06.2022 ರಂದು ಕೇಳಿರುತ್ತಾರೆ ಎಂದು ಹೇಳುತ್ತಾರೆ. ಹಣವನ್ನು ಸಾಲ ಕೇಳಿದ ದಿನದಂದೇ ಕೊಟ್ಟಿರುತ್ತೇನೆ. ಸಾಲ ಕೇಳಲು ಆರೋಪಿ ಒಬ್ಬನೇ ಬಂದಿರುತ್ತಾನೆ. ಸಾಲವನ್ನು ಆರೋಪಿ ನನ್ನ ಮನೆಗೆ ಬಂದೆ ಪಡೆದಿರುತ್ತಾನೆ. ಆರೋಪಿ ಚೆಕ್ ನ್ನು ಯಾವತ್ತು ನಿಮಗೆ ಕೊಟ್ಟರು ಎಂದರೆ ಸಾಕ್ಷಿ ಸಾಲ ಪಡೆದ ದಿನದಂದೇ ಕೊಟ್ಟಿದ್ದು, 6 ತಿಂಗಳ ನಂತರ ಬ್ಯಾಂಕಿನಲ್ಲಿ ಬೇರೆ ಕಡೆ ಲೋನ್ ಆಗುತ್ತದೆ, ನಿಮಗೆ ತಿಳಿಸುತ್ತೇನೆ, ಆಗ ನಗದೀಕರಣಕ್ಕೆ ಹಾಕಿಕೊಳ್ಳಿ ಎಂದು ತಿಳಿಸಿದರು ಎಂದು ಹೇಳುತ್ತಾರೆ.

ನಿಪಿ-1 ರಂತೆ ಚೆಕ್ ಗೆ ಸಾಲ ಪಡೆದ ದಿನದಂದೇ ದಿನಾಂಕವನ್ನು ನಮೂದಿಸಿ ಕೊಟ್ಟರಾ ಎಂದರೆ ಸಾಕ್ಷಿ ಹೌದು ಎಂದು ಹೇಳುತ್ತಾರೆ. ನಿಪಿ-1 ನ್ನು ಬರವಣಿಗೆ ಮಾಡಿದವರು ಯಾರು ಎಂದರೆ ಸಾಕ್ಷಿ ಗೊತ್ತಿಲ್ಲ, ನನ್ನ ಎದುರುಗಡೆ ಸಹಿ ಮಾಡಿದರು ಎಂದು ಹೇಳುತ್ತಾರೆ. ಜೂನ್ 10 ರಂದು ಸಾಲ ಕೊಟ್ಟೆ ಎಂದು ನಿಮ್ಮ ನೋಟೀಸನಲ್ಲಾಗಲೀ, ದೂರಿನಲ್ಲಾಗಲೀ ಹೇಳಿದ್ದೀರಾ ಎಂದರೆ ಸಾಕ್ಷಿ ದಿನಾಂಕ ಹೇಳಿಲ್ಲ, ಜೂನ್ ತಿಂಗಳು ಎಂದು ಹೇಳಿರುತ್ತೇನೆ ಎಂದು ಹೇಳುತ್ತಾರೆ.

ಆರೋಪಿ ವಾಣಿಜ್ಯ ಕಟ್ಟಡ ಕಟ್ಟಲು ಸಾಲ ಪಡೆದರು ಎಂದು ಹೇಳಿದ್ದು, ಅವರು ಎಲ್ಲಿ ಕಟ್ಟಡ ಕಟ್ಟುತ್ತಿದ್ದಾರೆಂಬ ಬಗ್ಗೆ ಮಾಹಿತಿ ಪಡೆದರಾ ಎಂದರೆ ಸಾಕ್ಷಿ ಹುಣಸೂರು ಪಟ್ಟಣದಲ್ಲೇ ಕಟ್ಟುತ್ತಿದ್ದಾರೆಂದು ತಿಳಿಸಿದರು ಎಂದು ಹೇಳುತ್ತಾರೆ. ಸದರಿ ವಿಚಾರವಾಗಿ ದಾಖಲಾತಿಗಳನ್ನು ಪರಿಶೀಲಿಸಿದ್ದೀರಾ ಎಂದರೆ ಸಾಕ್ಷಿ ಇಲ್ಲ ಎಂದು ಹೇಳುತ್ತಾರೆ. ಸಾಲವನ್ನು ಆರೋಪಿಗೆ ಖಾತೆ

ವರ್ಗಾವಣೆಯಿಂದಲೋ, ಡಿ.ಡಿ ಮುಖೇನವೋ, ಚೆಕ್ ಮುಖೇನವೋ ಅಥವಾ ನಗದು ರೂಪದಲ್ಲಿಯೋ ಕೊಟ್ಟಿರಿ ಎಂದರೆ ಸಾಕ್ಷಿ ನಗದಾಗಿ ಎಂದು ಹೇಳುತ್ತಾರೆ.

ಸಾಮಾನ್ಯವಾಗಿ ಯಾವುದೇ ವ್ಯಕ್ತಿಗೆ ಸಾಲ ಕೊಡಬೇಕಾದರೆ ಸದರಿ ವ್ಯಕ್ತಿ ಏನು ಕೆಲಸ ಮಾಡುತ್ತಿದ್ದಾರೆ, ಅವನ ಆದಾಯದ ಮೂಲವೇನು ಎಂಬುದನ್ನು ತಿಳಿದುಕೊಂಡು ಕೊಡಲಾಗುತ್ತದೆಂದರೆ ಸರಿ. ಆರೋಪಿ ಬಡಗಿ ಕೆಲಸ ಮಾಡುತ್ತಾನೆಂದರೆ ಸರಿ. ಆರೋಪಿಗೆ ಬಡಗಿ ಕೆಲಸದಿಂದ ಬಂದ ಆದಾಯವನ್ನು ಬಿಟ್ಟರೇ ಬೇರೆ ಆದಾಯವಿಲ್ಲ ಎಂದರೆ ಸಾಕ್ಷಿ ಹೌದು ಎಂದು ಹೇಳುತ್ತಾರೆ. ಹಣವನ್ನು ಆರೋಪಿಗೆ ಸಾಲವಾಗಿ ನೀಡುವ ಕಾಲಕ್ಕೆ ಖಾತೆಯಿಂದ ತೆಗೆದು ಕೊಟ್ಟಿರಾ ಎಂದರೆ ಸಾಕ್ಷಿ 6 ತಿಂಗಳ ಹಿಂದೆ ತೆಗೆದಿದ್ದೆ ಎಂದು ಹೇಳುತ್ತಾರೆ.

ನಾನು ವಿಮೆ ಏಜೆಂಟ್ ಕೆಲಸ ಮಾಡುತ್ತೇನೆ. ನನಗೆ ಸೇರಿದ ಜಮೀನು ಇಲ್ಲ. ನನಗೆ ವರ್ಷಕ್ಕೆ 4 ಲಕ್ಷ ಆದಾಯವಿದೆ. ನಿಮ್ಮ ಆದಾಯದ ಬಗ್ಗೆ ದಾಖಲಾತಿ ಕೊಟ್ಟಿದ್ದೀರಾ ಎಂದರೆ ಸಾಕ್ಷಿ ಇಲ್ಲ ಎಂದು ಹೇಳುತ್ತಾರೆ. ಆರೋಪಿ ಹಾಗೂ ನಿಮ್ಮ ನಡುವೆ ಬೇರೆ ಹಣಕಾಸಿನ ವ್ಯವಹಾರ ನಡೆದಿತ್ತಾ ಎಂದರೆ ಸಾಕ್ಷಿ ಇಲ್ಲ ಎಂದು ಹೇಳುತ್ತಾರೆ. ಸಾಕ್ಷಿ ಮುಂದುವರೆದು ಮುಂಚೆ ಮಾಡಿದೇವು ಎಂದು ಹೇಳುತ್ತಾರೆ.

**( ಈ ಹಂತದಲ್ಲಿ ಮುಂದುವರೆದ ಪಾಟೀಸವಾಲಿಗೆ ಕಾಲಾವಕಾಶ ಕೋರಿದ್ದರಿಂದ, ಆಲಿಸಿ ಅನುಮತಿಸಲಾಯಿತು)**

ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು.

ಓ ಹೇ ಕೇ ಸರಿ ಇದೆ.

ಪ್ರಧಾನ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ,
ಹುಣಸೂರು